# ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಯಾದಗಿರಿ

ಎಸ್.ಸಿ. ನಂ. 38/2018

ಸೈದಾಪೂರ ಪೋಲೀಸ ಠಾಣೆ ......ಪಿರ್ಯಾದಿ

ವಿರುದ್ಧ

ಆಂಜನೇಯ ಮತ್ತು ಇನ್ನೊಬ್ಬ .......ಆರೋಪಿತರು

## ದೋಷಾರೋಪಣೆ

ನಾನು ಶ್ರೀ.ಶಿವನಗೌಡ ಬಿಕಾಂ.,ಎಲ್ಎಲ್.ಬಿ(ಸ್ಪೆಷಲ್), ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಯಾದಗಿರಿ, ಆರೋಪಿತರಾದಃ

| | |
|---|---|
| ಆರೋಪಿ-1 | ಆಂಜನೇಯ ತಂದೆ ಭೀಮಣ್ಣ ಬೋಯಿನ್, ವಯಸ್ಸುಃ 24 ವರ್ಷಗಳು, ಉದ್ಯೋಗಃ ಒಕ್ಕಲುತನ ಸಾಃ ಬಳಿಚಕ್ರ ತಾಃ ತಾಃ ಜಿಃ ಯಾದಗಿರಿ. |
| ಆರೋಪಿ-2 | ಸಾಬಣ್ಣ ತಂದೆ ಭೀಮಣ್ಣ ಬೋಯಿನ್, ವಯಸ್ಸುಃ 30 ವರ್ಷಗಳು, ಉದ್ಯೋಗಃ ಒಕ್ಕಲುತನ ಸಾಃ ಬಳಿಚಕ್ರ ತಾಃ ತಾಃ ಜಿಃ ಯಾದಗಿರಿ. |

ನಿಮ್ಮನ್ನು ಕೆಳಕಂಡಂತೆ ದೋಷಾರೋಪಣೆಗೆ ಗುರುಪಡಿಸುತ್ತೇನೆ.

ಮೇಲೆ ಹೆಸರಿಸಿದ ಆರೋಪಿತರಾದ ನೀವು ದಿಃ12.02.2018 ರಂದು ಚಾಸಾ-1 ಶರಣಪ್ಪನ ಮಗ ತಿಮ್ಮಪ್ಪ ಸೀಕ್ರಿ ಇತನು ಬಳಿಚಕ್ರ ಗ್ರಾಮದ ದೊಡ್ಡ ಹಣಮಂತಪ್ಪ ಬೋಯಿನ್ ಇವರ ಮುಚ್ಚಿದ ಅಂಗಡಿಯ ಮುಂದೆ ಕುಂತು ತನ್ನ ವಾರಿಗರೊಟ್ಟಿಗೆ ಬಳಹ ಹೊತ್ತು ತನಕ ಮಾತನಾಡಿ ತನ್ನ ಮನೆಕಡೆಗೆ ಎದ್ದು ಹೋಗುತ್ತಿರುವಾಗ ಆದೇ ವೇಳೆಗೆ 1ನೇ ಆರೋಪಿಯಾದ ಆಂಜನೇಯ ನೀನು ಬಳಿಚಕ್ರ ಗ್ರಾಮದ ಗೇಟಿನ ಕಡೆಯಿಂದ ಬಂದು ತಿಮ್ಮಪ್ಪನಿಗೆ ಲೇ ಮಾವ ಊಟಾಯ್ತೇನ್ಲೇ ಅಂತಾ ಕೇಳಿದಾಗ ಇಲ್ಲಾ ಅಳೇದೇವ್ರು ಏನ್ ನಡೆದದ್ಲೆ ಮಗನೇ ಅಂತಾ ಒಬ್ಬರಿಗೊಬ್ಬರೂ ಮಜಾಕ್ ಮಾಡುತ್ತಿರುವಾಗ, 2ನೇ ಆರೋಪಿ ಸಾಬಣ್ಣ ನೀನು ಅಲ್ಲಿಗೆ ಬಂದು ಆ ರಂಡಿ ಮಗನಾಗೂಡ ಯಾಕ್ ವಾದ ಮಾಡ್ತಿ ಅಂತಾ 1ನೇ ಆರೋಪಿಗೆ ಹೇಳಿದಾಗ, ತಿಮ್ಮಪ್ಪ ಇತನು ಸೀದಾ ಮಾತಡ್ಲೇ ಅಳಿಯ ಅಂತಾ ಮುಂದಕ್ಕೆ ಹೋದಾಗ ಹಿಂದಕ್ಕೆ ಸರಿಲೇ ಅಂತಾ ಆರೋಪಿ-1 ಮತ್ತು 2 ನೀವು ತಿಮ್ಮಪ್ಪನಿಗೆ ದೊಬ್ಬಿಸಿಕೊಟ್ಟಾಗ, ನೀವು ದೊಬ್ಬಿದ ರಭಸಕ್ಕೆ ತಿಮ್ಮಪ್ಪ ದಿಃ 12.02.2018 ರಂದು ರಾತ್ರಿ 10 ಗಂಟೆಗೆ ಬಳಿಚಕ್ರ ಗ್ರಾಮದ ಹಳೆ ಬ್ಯಾಂಕಿನ ಹತ್ತಿರದ ಸಾರ್ವಜನಿಕ ಸಿಮೆಂಟ್ ರೋಡಿನ ಮೇಲೆ ಅಂಗಾತವಾಗಿ

ಬಿದ್ದಾಗ ತಲೆಯ ಹಿಂಭಾಗಕ್ಕೆ ಒಳಪೆಟ್ಟಾಗಿದ್ದರಿಂದ, ಮರುದಿನ ಯಾದಗಿರಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿದ್ದು, ವೈದ್ಯರು ಹೆಚ್ಚಿನ ಉಪಚಾರಕ್ಕೆ ಅಂತಾ ರಿಮ್ಸ್ ಆಸ್ಪತ್ರೆ ರಾಯಚೂರು, ಅಲ್ಲಿಂದ ವಿಮ್ಸ್ ಆಸ್ಪತ್ರೆ ಬಳ್ಳಾರಿ ಸೇರಿಕೆ ಮಾಡಿ ಅಲ್ಲಿಂದ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮದ್ಯ ದಿಃ 14.02.2018 ರಂದು ಮದ್ಯಾಹ್ನ 12.30 ಗಂಟೆಗೆ ಅಂಬುಲೆನ್ಸ್ ವಾಹನದಲ್ಲಿ ತಿಮ್ಮಪ್ಪ ಮೃತಪಟ್ಟಿರುತ್ತಾನೆ, ತನ್ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆ ಕಲಂ. 304 ಜೊತೆಯಲ್ಲಿ ಓದಲಾದ ಕಲಂ.349ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

2ನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನಿವೆಲ್ಲಾ ಆರೋಪಿತರು ಚಾಸಾ-1 ಶರಣಪ್ಪನ ಮಗ ತಿಮ್ಮಪ್ಪ ಸೀಕ್ರಿ ಇತನಿಗೆ, 2ನೇ ಆರೋಪಿ ಸಾಬಣ್ಣ ನೀನು “ಆ ರಂಡಿ ಮಗನಾಗೂಡ ಯಾಕ್ ವಾದ ಮಾಡ್ತಿ” ಅಂತಾ ಅವಾಚ್ಯ ಶಬ್ದಗಳಿಂದ ಬೈದು, ತನ್ಮೂಲಕ ನೀವೆಲ್ಲರೂ ಭಾರತೀಯ ದಂಡ ಸಂಹಿತೆ ಕಲಂ.504 ಜೊತೆಯಲ್ಲಿ ಓದಲಾದ ಕಲಂ.34ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗಳಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 27-01-2020 ರಂದು ಆದೇಶಿಸಿದ್ದೇನೆ.

ಸ್ಥಳ ಃ ಯಾದಗಿರಿ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ